# ಭಾಗೀದಾರರ ಸಹಭಾಗಿತ್ವ

ಪ್ರತೀ ಮಗುವಿನ ಉತ್ತಮ ಭವಿಷ್ಯಕ್ಕಾಗಿ ಹಾಗೂ ಗುಣಮಟ್ಟದ ಶಿಕ್ಷಣ ದೊರೆಯಲು ಪೂರಕ ವಾತಾವರಣ ನಿರ್ಮಿಸುವಲ್ಲಿ ಶಿಕ್ಷಕರು, ತಂದೆ- ತಾಯಿ, ಪೋಷಕ, ಎಸ್.ಡಿ.ಎಂ.ಸಿ, ಸಂಸ್ಥೆಗಳು, ಪರಿಸರ ಮತ್ತು ಸಮುದಾಯದ ಪಾತ್ರ ಮಹತ್ತರವಾಗಿದೆ. ಇವರೆಲ್ಲರೊಟ್ಟಿಗಿನ ಸಹಭಾಗಿತ್ವವು ಪರಿಣಾಮಕಾರಿ ಶಾಲಾ ಅಭಿವೃದ್ಧಿಗೆ ಬೆಂಬಲಿಸಿ ಸುಸ್ಥಿರತೆಯನ್ನೂ ಕಾಪಾಡುತ್ತದೆ. ಸಂವಿಧಾನದ ಆಶಯಕ್ಕೆ ಪೂರಕವಾಗಿ ಎನ್.ಸಿ.ಎಫ್. 2005 ಸಹ ಭಾಗೀದಾರರ ಸಹಭಾಗಿತ್ವಕ್ಕೆ ಒತ್ತು ನೀಡಿದೆ ಹಾಗೂ ಸರ್ವ ಶಿಕ್ಷಣ ಅಭಿಯಾನವು ಎಲ್ಲಾ ಭಾಗೀದಾರರ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸುತ್ತದೆ ಮಾತ್ರವಲ್ಲ ಸಮುದಾಯಗಳ ನಡುವೆ ಹೊಣೆಗಾರಿಕೆಯನ್ನು ಮತ್ತು ಪಾರದರ್ಶಕತೆಯನ್ನು ಉತ್ತೇಜಿಸುತ್ತದೆ. ಈ ನಿಟ್ಟಿನಲ್ಲಿ ಮುಖ್ಯ ಶಿಕ್ಷಕರು ತಮ್ಮ ಶಾಲಾಭಿವೃದ್ಧಿಯಲ್ಲಿ ಭಾಗೀದಾರರನ್ನು ಒಳಗೊಳ್ಳಿಸುವ ಅವಶ್ಯಕತೆ ಇದೆ.

ಗುಣಾತ್ಮಕ ಶಿಕ್ಷಣವನ್ನು ಸಾಧಿಸಲು ಸಮಾಜದಲ್ಲಿರುವ ವಿವಿಧ ಸಂಸ್ಥೆಗಳು / ಗುಂಪುಗಳು ಸಹ ತಮ್ಮ ಪಾತ್ರ ಮತ್ತು ಜವಾಬ್ದಾರಿಗಳನ್ನು ಅರಿಯಬೇಕು. ಈ ಸಮಾಜದಲ್ಲಿ ಹೆಚ್ಚಿನ ವಿಚಾರಗಳಲ್ಲಿ (ಲಿಂಗ, ಜಾತಿ, ಭಾಷೆ, ಸಾಮಾಜಿಕ..) ತಾಂಡವವಾಡುತ್ತಿರುವ ಅಸಮತೋಲನವನ್ನು ನಿವಾರಿಸಲು ಸಮಾಜದ ವಿವಿಧ ಸಮುದಾಯಗಳ ನಡುವೆ ಕೊಂಡಿಯನ್ನು ನಿರ್ಮಿಸಬೇಕು ಮತ್ತು ಅದನ್ನು ಸಾರ್ವತ್ರೀಕರಣದ ಮೂಲಕ ಸಾಧಿಸಬೇಕು ಎನ್ನುವುದು ಸರ್ವಶಿಕ್ಷಣ ಅಭಿಯಾನದ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಆ ನಿಟ್ಟಿನಲ್ಲಿ ಸರ್ವಶಿಕ್ಷಣ ಅಭಿಯಾನದ ಈ ಕೆಳಗಿನ ಘೋಷವಾಕ್ಯ ಮಹತ್ವ ಪಡೆದಿದೆ :

"ಸಮುದಾಯ ಕೇಂದ್ರಿತವಾದ ಎಲ್ಲಾ ಬಗೆಯ ಶೈಕ್ಷಣಿಕ ಮಧ್ಯವರ್ತನೆಗಳು ಅವುಗಳ ಅನುಷ್ಠಾನದಲ್ಲಿ ಎಲ್ಲ ಭಾಗೀಧಾರರ ಪಾಲ್ಗೊಳ್ಳುವಿಕೆಯನ್ನು, ಅದರಲ್ಲೂ ಶಿಕ್ಷಕರು, ಸಮುದಾಯದವರು, ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಅದರ ಪ್ರತಿನಿಧಿಗಳನ್ನು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸಬೇಕು"

ಮೇಲಿನ ಉದ್ದೇಶಗಳಿಗನುಗುಣವಾಗಿ .....

ಶಾಲೆಗಳ ಅಭಿವೃದ್ದಿಯ ನಿಟ್ಟಿನಲ್ಲಿ ಶಾಲಾ ನಾಯಕತ್ವವನ್ನು ನಿರ್ವಹಿಸುವ ಮುಖ್ಯ ಶಿಕ್ಷಕರು ಈ ಕೆಳಗಿನ ಅಂಶಗಳನ್ನು ಗ್ರಹಿಸಿದರೆ, ಅರ್ಥಪೂರ್ಣವಾದ ಅಭಿವೃದ್ದಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯ :

- ಭಾಗೀಧಾರರನ್ನು ಸಂಪರ್ಕಿಸುವಾಗ ಅವರು ನೀಡುವ ಸಲಹೆ / ಅಭಿಪ್ರಾಯಗಳನ್ನು, ಮಾಹಿತಿಗಳನ್ನು ಸ್ವೀಕರಿಸಲು ಮುಕ್ತ ಮನಸ್ಸನ್ನು ಹೊಂದಿರುವುದು ಅವಶ್ಯಕವಾಗಿದೆ. ಈ ಕ್ಷಣಕ್ಕೆ ನೀವು ಹೇಳುತ್ತಿರುವುದು ಅಸಂಬದ್ದ ಎಂಬಂತೆ ನೋಡದೆ ಮುಂದೆ ಪ್ರಯೋಜನಕಾರಿ ಎಂದು ಅವರ ವಿಚಾರಗಳನ್ನು ಸ್ವೀಕರಿಸಬೇಕಿದೆ.
- ಪ್ರತೀ ಭಾಗೀಧಾರನೂ 'ಗೌರವಾನ್ವಿತ ಸರಿಸಮಾನ' ಎಂದು ಗ್ರಹಿಸಬೇಕು. ಮಾತ್ರವಲ್ಲ ಶಾಲಾ ಪ್ರಕ್ರಿಯೆಯಲ್ಲಿ ಅವರು ಅವಿಭಾಜ್ಯ ಅಂಗವಾಗಿದ್ದು, ಶಾಲೆಯ ಮೌಲ್ಯವನ್ನು ಹೆಚ್ಚಿಸುವ ಸಾಮರ್ಥ್ಯ ಹೊಂದಿದ್ದಾರೆ ಎಂದು ತಿಳಿಯಬೇಕು.
- ಜನರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಾಗ ಶಾಲೆಯ ಅಭಿವೃದ್ದಿಗೆ ಆ ಅಂಶ ಮಹತ್ವದ್ದಾಗಿದೆ ಎಂಬಂತೆ ಸ್ವೀಕರಿಸಿ, ಅಭಿವೃದ್ದಿಗೆ ಭಾಗವಹಿಸುವಿಕೆ ಮುಖ್ಯವೆಂದು ಗ್ರಹಿಸಿ ಅವರ ಅಭಿಪ್ರಾಯ ಅವರ ಕಾಳಜಿಗಳಂತೆ ಗ್ರಹಿಸಬೇಕಿದೆಯೇ ವಿನಹ ಅವರು ಬರೀ ದೂರುತ್ತಿದ್ದಾರೆ ಎಂದು ತಿಳಿಯಬಾರದು.